ಬಿಡಾರಗಳಿದ್ದವು ನಿಜ. ಆದರೆ, ಅದಕ್ಕಷ್ಟೇ ಸೀಮಿತಗೊಳಿಸುವುದು ಸರಿಯಲ್ಲ. ಆ ಪ್ರಾಂತಕ್ಕೆ ಅದರದೇ ವ್ಯಕ್ತಿತ್ವವೂ ಇತ್ತು. ಸ್ಥಳೀಯ ಜನರಿದ್ದರು. ಈ ವ್ಯವಸ್ಥೆಯನ್ನು ನಿರ್ವಹಿಸಲೂ ಜನರಿದ್ದರು. ಶ್ರಮಿಕ ಬಿಡಾರಗಳು ಕಾರಾಗೃಹಗಳಲ್ಲ. ಹೀಗಾಗಿ, ಪಿಯಾನೊದಂತಹ ವಾದ್ಯದ ಅಸ್ತಿತ್ವ, ಅದರ ಸುತ್ತ ಬೆಳೆದಿರುವ ಕಥನ ಮತ್ತು ಸಂಸ್ಕೃತಿಯನ್ನು ನಾವು ಅಲ್ಲಗಳೆಯುವಂತಿಲ್ಲ. ಯಾವುದೇ ಪ್ರದೇಶದ ಬಗ್ಗೆ ಮನಸ್ಸಿನಲ್ಲಿ ಏರ್ಪಡಿಸಿಕೊಳ್ಳುವ ಸಿದ್ಧ ಪಡಿಯಚ್ಚಿಗೆ ವಿರುದ್ಧವಾಗಿ ಅಲ್ಲಿನ ಸಂಸ್ಕೃತಿಯ ಅನೇಕ ಪದರಗಳಿರುತ್ತವೆ. ಅವುಗಳು ತಮ್ಮದೇ ಕಥೆಗಳನ್ನು ಹೇಳುತ್ತವೆ. ಅದನ್ನು ಕೇಳುವ, ಆ ಕಥೆಗಳಿಂದ ಮತ್ತೊಂದು ಕಥನವನ್ನು ಕಟ್ಟುವ ತಾಳ್ಮೆ ನಮಗಿರಬೇಕು. ಸೋಫಿ ತಮ್ಮ ಪುಸ್ತಕದಲ್ಲಿ – ಪುಸ್ತಕ ಬರೆಯಲು ಪ್ರೇರೇಪಿಸಿದ ಯಾತ್ರೆಯಲ್ಲಿ ಆ ತಾಳ್ಮೆಯನ್ನು ಪ್ರಕಟಪಡಿಸುತ್ತಾರೆ.

ಸೈಬೀರಿಯಾದ ಶ್ರಮಿಕ ಬಿಡಾರಗಳಿಗೆ ಕಳುಹಿಸುತ್ತಿದ್ದ ಜನರ ಹಿನ್ನೆಲೆಯೂ ಪಿಯಾನೊಗಳ ಅಸ್ತಿತ್ವಕ್ಕೆ ಕಾರಣವಾಗಿರಬಹುದು. ಅಲ್ಲಿ ಶಿಕ್ಷೆಗೊಳಗಾದವರು ಕಳವು–ಕೊಲೆಯಂಥ ಅಪರಾಧಗಳನ್ನೆಸಗಿ ಶಿಕ್ಷೆ ಅನುಭವಿಸಲು ಬಂದವರಲ್ಲ. ಇವರೆಲ್ಲಾ ಉಚ್ಚ ವರ್ಗಕ್ಕೆ ಸೇರಿದ ಉನ್ನತ ಎನ್ನಿಸುವ ಆಸಕ್ತಿಗಳಿದ್ದ ಮೇಲ್ವರ್ಗದ ಬುದ್ಧಿಜೀವಿಗಳು. ಈ ಬುದ್ಧಿಜೀವಿಗಳ ಸಂಗೀತವಾದ್ಯ ಪಿಯಾನೊ. ಹೀಗಾಗಿ, ಗಡೀಪಾರು ಮಾಡುವ ಪ್ರಕ್ರಿಯೆಯಲ್ಲಿಯೇ ಪಿಯಾನೊಗಳನ್ನೂ ಸೈಬೀರಿಯಾದತ್ತ ಅಟ್ಟುವ ಕೆಲಸವೂ ಆಗಿರಬಹುದು. ರಷ್ಯಾದ ಚರಿತ್ರೆಯಲ್ಲಿ ಸ್ಟಾಲಿನ್ನನ ನಿರಂಕುಶತೆಯ ಕಾಲದಲ್ಲಿ ಸಾಂಸ್ಕೃತಿಕ ಶುದ್ಧೀಕರಣವಾದಾಗ ಪಿಯಾನೊಗಳ ಸಂಖ್ಯೆ ಬೆಳೆಯಲಿಲ್ಲ ಎಂದು ಸೋಫಿ ಹೇಳುತ್ತಾರೆ. ಆದರೆ, ಸ್ಟಾಲಿನ್ನನ ಆಡಳಿತ ಮುಗಿದು ಕ್ರುಶ್ಚೇವ್ ಆಡಳಿತ ಬಂದಾಗ ಪಿಯಾನೊಗಳು ವಾಪಸ್ಸಾದವು. ಎಲ್ಲಕ್ಕಿಂತ ಆಸಕ್ತಿಕರ ಮಾಹಿತಿ: 1908ರಲ್ಲಿ ಹೆನ್ರಿ ಫೋರ್ಡ್ ತನ್ನ ಮೊದಲ ಕಾರು 'ಮಾಡಲ್ ಟಿ' ಮಾರುಕಟ್ಟೆಗೆ ಬಿಡುಗಡೆ ಮಾಡಿದ ನಂತರ, ಪಾಶ್ಚಾತ್ಯ ಲೋಕದಲ್ಲಿ ಗತ್ತು–ಶ್ರೀಮಂತಿಕೆ–ಹಮ್ಮಿನ ಪ್ರತೀಕವಾಗಿದ್ದ ಪಿಯಾನೊ ಬದಿಗೆ ಸರಿದು ಆ ಸ್ಥಾನಕ್ಕೆ ಕಾರು ಬಂತಂತೆ!

ದೊಡ್ಡ ಗಾತ್ರದ ವಾದ್ಯ. ಅದಕ್ಕಂಟಿರುವ ಶಿಷ್ಟತೆ ಮತ್ತು ಬೌದ್ಧಿಕತೆ. ತಯಾರಿಸುವ, ಶ್ರುತಿ ಮಾಡುವ, ನುಡಿಸುವಲ್ಲಿನ ಸಂಕೀರ್ಣತೆ. ಅದಕ್ಕೆ ಅಂಟಿರುವ ಅರಿಸ್ಟೊಕ್ರಸಿಯ ವರ್ಗಲೇಪನ. ಸ್ಥಳೀಯತೆಗೆ ವಿರುದ್ಧವಾಗಿ ಆಮದಾದ ಆಧುನಿಕತೆ. ಅದರ ಬೆಲೆ, ನಿರ್ವಹಣೆಯ ಖರ್ಚಿನಲ್ಲಿ ಅಡಕವಾಗಿರುವ ಶ್ರೀಮಂತಿಕೆಯ ವರ್ಗೀಕರಣ. ಈ ಎಲ್ಲದರ ಹಿನ್ನೆಲೆಯಲ್ಲಿ ದುರ್ಗಮ ಪ್ರದೇಶವಾದ ಸೈಬೀರಿಯಾ. ಅಲ್ಲಿನ ಶ್ರಮಿಕ ಬಿಡಾರಗಳು. ಅನುಭವಿಸಬೇಕಾದ ಶಿಕ್ಷೆ. ಈ ವಿರೋಧಾಭಾಸವನ್ನು ಹಾಗೂ ಸಂಕೀರ್ಣತೆಯನ್ನು ಈ ಪುಸ್ತಕ ಅದ್ಭುತವಾಗಿ ಸೆರೆಹಿಡಿಯುತ್ತದೆ. ಚರಿತ್ರೆಯನ್ನು ಓದುವಾಗ, ತಾರೀಕು, ಘಟನೆಗಳನ್ನು ಒಣ ಪಠ್ಯದಂತೆ ಓದಿ ಅರಗಿಸಿಕೊಳ್ಳುವ ಪ್ರಕ್ರಿಯೆಯನ್ನು ಪ್ರಶ್ನಿಸುತ್ತಲೇ, ಚರಿತ್ರೆಯಲ್ಲಿರುವ ಮಾನವೀಯ ಅಂಶಗಳನ್ನು ಮತ್ತು ಅದರ ವಿಭಿನ್ನ ಆಯಾಮಗಳನ್ನು ಈ ಕಥನ ಸೆರೆಹಿಡಿಯುತ್ತದೆ. ಒಂದು ವಾದ್ಯವನ್ನು ಹಿಡಿದು ವಿಶ್ವದ ನಾಲ್ಕುನೂರು ವರ್ಷಗಳಿಗಿಂತ ಹೆಚ್ಚಿನ ಕಾಲಮಾನದ ಚರಿತ್ರೆಯ ವಿಹಂಗಮ ದೃಶ್ಯವನ್ನು ಹೇಗೆ ಕಾಣಬಹುದೆನ್ನುವುದನ್ನು ಸೋಫಿ ತೋರಿಸಿಕೊಡುತ್ತಾರೆ. ಪಿಯಾನೊಗಳ ಶೋಧದಲ್ಲಿ ತೊಡಗಿರುವಾಗಲೇ, ರಷ್ಯಾದ ಪಾಶ್ಚಾತ್ಯೀಕರಣ, ತ್ಸಾರ್ ಆಳ್ವಿಕೆ, ಫ್ರೆಂಚ್ ಕ್ರಾಂತಿ, ಬೀಥೊವೆನ್ ಮತ್ತು ಮೋತ್ಸಾರ್ಟ್‌ರ ಆಗಮನ ಮತ್ತು ನಿರ್ಗಮನ, ರಷ್ಯಾದ ಮೇಲೆ ನೆಪೋಲಿಯನ್ನನ ಆಕ್ರಮಣ ಮತ್ತು (ಚಳಿಗಾಲವನ್ನು ತಡೆಯಲಾರದೇ ಅಲ್ಲಿಂದ ಕೈಗೊಂಡ) ಪಲಾಯನ, ದಾಸ್ತೋವ್‌ಸ್ಕಿ, ಚೆಕಾಫ್‌ರ ಸೈಬೀರಿಯಾ ವಾಸ ಮತ್ತು ಸಾಹಿತ್ಯ, ಸಂಗೀತ ಕಛೇರಿಯ ಬದಲಿಗೆ ಗ್ರಾಮಾಫೋನಿನಲ್ಲಿ ಸಂಗೀತವನ್ನು ಕೇಳಬಹುದಾದ ಸಾಧ್ಯತೆ, ರಷ್ಯಾದ ಬೋಲ್ಶೆವಿಕ್ ಕ್ರಾಂತಿ, ಲೆನಿನ್–ಸ್ಟಾಲಿನ್ನರ ಆಡಳಿತಕಾಲ, ಎರಡು ವಿಶ್ವಯುದ್ಧಗಳು, ಪೆರೆಸ್ತ್ರೋಯ್ಕ, ಗಾರ್ಬಚೊವ್ ಆಡಳಿತದಲ್ಲಿ ಸೋವಿಯತ್ ಒಕ್ಕೂಟದ ವಿಘಟನೆ, ಯಕ್‌ಸ್ಟಿನ್ ಮತ್ತು ಪುಟಿನ್‌ರ ಆಡಳಿತ... ಈ ಎಲ್ಲವೂ ಒಂದು ವಿಸ್ತಾರವಾದ ಕಾಲಮಾನವನ್ನು ಕವರ್ ಮಾಡುತ್ತದೆ. ಒಂದು ಪಿಯಾನೊವನ್ನು ಹಿಡಿದು ಹೊರಟರೆ ಏನೆಲ್ಲಾ ದಕ್ಕಬಹುದು ಎನ್ನುವುದಕ್ಕೆ ಈ ಪುಸ್ತಕ ಅದ್ಭುತ ನಿದರ್ಶನವಾಗಿದೆ. ●